# ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು. ಗುಂಡ್ಲುಪೇಟೆ

## ದೈಹಿಕ ಶಿಕ್ಷಣ ವಿಭಾಗ

### ಚಾಮರಾಜವಲಯ ಮಹಿಳಾ ಕ್ರೀಡಾಕೂಟದಲ್ಲಿ ಭಾಗವಹಿದ ವರದಿ

ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜ ವಲಯ ಮಟ್ಟದ ಮಹಿಳಾ ಕ್ರೀಡಾಕೂಟ-ವನ್ನು ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲದಲ್ಲಿ ದಿನಾಂಕ: 12-07-2022 ರಂದು ಅಯೋಜಿಸಿದ್ದು ನಮ್ಮ ಕಾಲೇಜಿನ 13 ವಿದ್ಯಾರ್ಥಿನಿಯರು ಥ್ರೋ-ಬಾಲ್.ಟೆನ್ನಿಕಾಯ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನವನ್ನು ನೀಡಿದ್ದು ಥ್ರೋಬಾಲ್ ಸ್ಪರ್ಧೆಯಲ್ಲಿ ಸೆಮಿಫೈನಲ್ ಪ್ರವೇಶ ಪಡೆದು ನಾಲ್ಕನೇ ಸ್ಥಾನವನ್ನು ಪಡೆದಿರುತ್ತಾರೆ.






# ಪ್ರತಿಭಾನ್ವೇಷಣಾ ಕಾರ್ಯಕ್ರಮದ ವರದಿ

ದಿನಾಂಕ : 14-07-2022 ಮತ್ತು ದಿನಾಂಕ 15-07-2022 ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ಪ್ರತಿಭಾನ್ವೇಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ 14-07-2022 ರಂದು ಪ್ರತಿಭಾನ್ವೇಷಣಾ ಕಾರ್ಯಕ್ರಮದ ಉದ್ಘಾಟನೆಯನ್ನು ಎಂ.ಪಿ ಸುನೀಲ್, ಕಾರ್ಯದರ್ಶಿಗಳು ಜವಹರ್ ~~ಶಿಕ್ಷಣ~~ ಶಿಕ್ಷಣ ಸಂಸ್ಥೆ, ಗುಂಡ್ಲುಪೇಟೆ ರವರು ಉದ್ಘಾಟಿಸಿ ಉದ್ಘಾಟನಾ ಭಾಷಣ ಮಾಡಿರುತ್ತಾರೆ. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ಮಹದೇವಪ್ಪನವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಬಿ. ಪ್ರಭುಸ್ವಾಮಿ ಸಂಚಾಲಕರು ಸಾಂಸ್ಕೃತಿಕ ವೇದಿಕೆ, ಹಾಗು ಶ್ರೀ: ಗಿರಿಜಾಪತಿ IQAC ಸಂಚಾಲಕರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಕಾಲೇಜಿನ ಅಧ್ಯಾಪಕರು & ಅಧ್ಯಾಪಕೇತರ ವರ್ಗದವರು ಹಾಜರಿದ್ದರು.

ಪ್ರತಿಭಾನ್ವೇಷಣಾ ಕಾರ್ಯಕ್ರಮದ ಸಂಬಂಧ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು.

ಪ್ರಾಚಾರ್ಯರು
ಜೆ.ಎಸ್.ಎಸ್.ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ-571 111

PTO

17

## ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಂಗೋತ್ಸವ – 2022

## ಉದ್ಘಾಟನಾ ಸಮಾರಂಭದ ವರದಿ

---

**ಸುತ್ತೂರು ಶ್ರೀಮಠವು ಧಾರ್ಮಿಕದ ಜೊತೆಗೆ ಜನಸಾಮಾನ್ಯರಿಗೆ ಹಲವು ರಂಗಗಳಲ್ಲಿ ಸೇವೆಗಳನ್ನು ಒದಗಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ – ಶ್ರೀ. ಸಿ. ಎಸ್. ನಿರಂಜನ್ ಕುಮಾರ್, ಶಾಸಕರು**

ದಿ: 19/12/22ರಂದು ಬೆಳಗ್ಗೆ 10.00 ಗಂಟೆಗೆ ಕಾಲೇಜಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್. ಪಿ. ಮಂಜುನಾಥ್, ಇವರ ನೇತೃತ್ವದಲ್ಲಿನ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಡಾ. ಗೀತಾಮಹದೇವ ಪ್ರಸಾದ್, ಸಾಹಿತಿಗಳು ಮತ್ತು ಮಾಜಿ ಸಚಿವರು, ಗುಂಡ್ಲುಪೇಟೆ ಇವರು ಉದ್ಘಾಟಿಸಿದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯರಾದ ಡಾ.ಹೆಚ್ ಬಸವನಗೌಡಪ್ಪ ಮತ್ತಿತರ ಗಣ್ಯರು ಉಪಸ್ಥಿತರಿದ್ದು ಶಿಬಿರದ ಚಿಕಿತ್ಸಾ ಕೊಠಡಿಗಳನ್ನು ವೀಕ್ಷಿಸಿ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಜೆಎಸ್‌ಎಸ್ ಅನುಭವಮಂಟಪದಲ್ಲಿ ನಡೆದ ವೇದಿಕೆ ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್. ಇಂದು ನಾವು ದೈಹಿಕ ಮತ್ತು ಮಾನಸಿಕ ಆರೋಗ್ಯಗಳ ರಕ್ಷಣೆಗಳತ್ತ ಗಮನಕೊಡಬೇಕಿದೆ. ಜೆಎಸ್‌ಎಸ್ ಆಸ್ಪತ್ರೆ ಭಾರತ ಸರಕಾರ ಮತ್ತು ವಿಶ್ವದ ಉನ್ನತ ವೈದ್ಯಕೀಯ ಗಸಂಸ್ಥೆಗಳು ನೀಡುವ ಗೌರವಾದರಗಳಿಗೆ ಪಾತ್ರವಾಗಿದೆ. ಇಲ್ಲಿ ಉತ್ಕೃಷ್ಟ ದರ್ಜೆಯ ಚಿಕಿತ್ಸಾ ಸೌಲಭ್ಯಗಳಿವೆ. ಕೋವಿಡ್ – 19 ರ ಲಸಿಕೆಯನ್ನು ಭಾರತಸರಕಾರವು ಜನರಿಗೆ ನೀಡುವ ಮೊದಲು, ಪರೀಕ್ಷೆಯನ್ನು ಪ್ರಯೋಗಾರ್ಥ ನಡೆಸುವಲ್ಲಿ ಆಸ್ಪತ್ರೆ ತೊಡಗಿತ್ತು. ವೆಂಟಿಲೇಟರ್‌ಗಳ ಕೊರತೆ ಆಗದಂತೆ ನೋಡಿಕೊಳ್ಳುವಲ್ಲಿ ಆಸ್ಪತ್ರೆ ಅತ್ಯಂತ ಮುತುವರ್ಜಿಯಿಂದ ಜನರ ಸೇವೆ ಮಾಡಿಕೊಂಡು ಬಂದಿದೆ, ಆ ಸಂಕಷ್ಟದಲ್ಲಿ ಚಿಕಿತ್ಸೆಗೆಂದು ಬಂದವರೆಲ್ಲ ಪುನರ್ಜನ್ಮ ಪಡೆದವರಂತೆ ಧನ್ಯತೆಗಳನ್ನು ವೈದ್ಯರಿಗೆ, ಆಡಳಿತ ಮಂಡಳಿಗೆ ಮತ್ತು ಶ್ರೀ ಮಠಕ್ಕೆ ಅರ್ಪಿಸಿರುವುದನ್ನು ನಾವು ಮರೆಯುವಂತಿಲ್ಲವೆಂದು ತಿಳಿಸಿದರು.

ವರ್ಷಪೂರ್ತಿ ನಡೆಯುವ ತಾಲ್ಲೂಕಿನ ಈ ಶಿಬಿರದಲ್ಲಿ ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವವರಿಗೆ ಮೈಸೂರಿನ ಆಸ್ಪತ್ರೆಯಲ್ಲಿ ರಿಯಾಯತಿ ದರದಲ್ಲಿ ಚಿಕತ್ಸೆ ಒದಗಿಸಲಾಗುತ್ತದೆ. ಅನಾರೋಗ್ಯದಿಂದ ಬಳಲುತ್ತಿರುವವರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕಿದೆ. ವೈದ್ಯಕೀಯ ಶಿಬಿರ ಆರೋಗ್ಯದ ಬಗ್ಗೆ ಅರಿವನ್ನು ನೀಡಿದರೆ ರಂಗೋತ್ಸವ ಕಲಾಭಿರುಚಿಯ ಮೂಲಕ ಸಾಂಸ್ಕೃತಿಕ ಅಭಿರುಚಿಯನ್ನು ನಮ್ಮಲ್ಲಿ ಬೆಳೆಸುತ್ತದೆ. ರಂಗೋತ್ಸವ ಪ್ರದರ್ಶನವನ್ನು ಇದೇ ಮೊದಲ ಬಾರಿಗೆ ಗುಂಡ್ಲುಪೇಟೆಗೆ ವಿಸ್ತರಿಸಿದ್ದು ಜನತೆಯ ಅಭಿಮಾನ ಹರ್ಷವನ್ನುಂಟು ಮಾಡಿದೆ ಎಂದು ಶುಭಕೋರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಮನಸ್ಸನ್ನು ಉತ್ತೇಜಿತಗೊಳಿಸುತ್ತವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಶಿಬಿರ ಕುರಿತು ಆಶಯ ನುಡಿಗಳನ್ನಾಡಿದ ತಾಲ್ಲೂಕಿನ ಶಾಸಕರಾದ ಶ್ರೀ ಸಿಎಸ್. ನಿರಂಜನಕುಮಾರ್. ಸುತ್ತೂರು ಶ್ರೀಕ್ಷೇತ್ರವು ಧಾರ್ಮಿಕ ಕ್ಷೇತ್ರದ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಹಲವಾರು ರಂಗಗಳಲ್ಲಿ ತನ್ನ ಸೇವೆಯನ್ನು ಒದಗಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೆಂದು ಪ್ರಶಂಸೆ ವ್ಯಕ್ತಪಡಿಸಿದರು. ಮೈಸೂರಿನ ಜೆಎಸ್‌ಎಸ್ ಅಸ್ಪತ್ರೆ ಅತ್ಯಂತ ದೊಡ್ಡ ಪ್ರಮಾಣದ ಸುಸಜ್ಜಿತ ಆಸ್ಪತ್ರೆಯಾಗಿದ್ದು ರೋಗಿಗಳನ್ನು ಗುಣಪಡಿಸುವಲ್ಲಿ ಮಂಚೂಣಿಯಲ್ಲಿದೆ, ಕೋವಿಡ್ – 19ರಂತಹ ಮಹಾಮಾರಿ ಸಂದರ್ಭದಲ್ಲಿ ಈ ಆಸ್ಪತ್ರೆಯಿಂದ ಬಹುತೇಕ ಹಿರಿಯರು, ಮಕ್ಕಳು, ತರುಣರು ಅಧಿಕಾರಿಗಳು, ರಾಜಕಾರಣಿಗಳು ಗುಣಮುಖರಾಗಿ ಮುನರ್ಜನ್ಮ ಪಡೆದವರಂತೆ ತಮ್ಮ ಧನ್ಯತೆಗಳನ್ನು ಅರ್ಪಿಸಿದ್ದಾರೆ. ಚಾಮರಾಜನಗರದಲ್ಲಿಯೂ ಸುತ್ತೂರುಶ್ರೀಗಳವರು ಜನಸಾಮಾನ್ಯರಿಗೆ ಉಪಯೋಗವಾಗುವಂತೆ ಆಸ್ಪತ್ರೆ ಆರಂಭಿಸಿರುವುದು ನಮ್ಮ ಭಾಗದ ಬಡಜನತೆಗೆ ತುಂಬ ಅನುಕೂಲವಾಗಿದೆ ಎಂದು ನುಡಿದರು. ಇಂದಿನ ಒತ್ತಡದ ದಿನಮಾನಗಳಲ್ಲಿ ಜನತೆ ವೈದ್ಯಕೀಯ ತಪಾಸಣೆಗಳನ್ನು ಆಗಿಂದಾಗ್ಗೆ ಪಡೆದುಕೊಳ್ಳುತ್ತಿರಬೇಕು. ಈ ಬಗ್ಗೆ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ, ಇಂದು ಆಯೋಜಿಸಿರುವ ವೈದ್ಯಕೀಯ ಶಿಬಿರ ವಿಶೇಷವಾಗಿದ್ದು ಇಲ್ಲಿ 75 ಜನ ನುರಿತ ವೈದ್ಯರು, ವೈದ್ಯಕೀಯ ಸಹಾಯಕರು, ಹೃದಯರೋಗ, ಕಿಡ್ನಿ, ಕಿವಿ,ಮೂಗು, ಗಂಟಲುಗಳ ತೊಂದರೆ, ಮಕ್ಕಳು ಮತ್ತು ಸ್ತ್ರೀಯರಿಗೆ ಸಂಬಂಧಿಸಿದ ಕಾಯಿಲೆಗಳು ಸೇರಿದಂತೆ ಹತ್ತಾರು ರೀತಿಯ ರೋಗಗಳನ್ನು ಪರಿಶೋಧಿಸಿ ಚಿಕಿತ್ಸೆಗಳನ್ನು ನೀಡುವ ಮತ್ತು ಅಗತ್ಯ ಔಷಧಿಗಳನ್ನು ಸಹ ಉಚಿತವಾಗಿ ಕೊಡುವ ಏರ್ಪಾಡುಗಳನ್ನು ಮಾಡಲಾಗಿದೆ,. ಜೊತೆಗೆ ಈ ಶಿಬಿರವು ವರ್ಷಪೂರ್ತಿ ಪ್ರತಿ ಎರಡನೆಯ ಭಾನುವಾರ ನಡೆಯಲಿದ್ದು ತಾಲ್ಲೂಕಿನ ಜನತೆ ಉಪಯೋಗ ಪಡೆದುಕೊಳ್ಳುವಂತೆ ಕರೆನೀಡಿದರು.

ರಂಗೋತ್ಸವವನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿಗಳಾದ ಶ್ರೀ ವೈ.ಎಂ. ಪುಟ್ಟಣಯ್ಯ ಡೋಲು ಬಾರಿಸುವುದರ ಮೂಲಕ ಉದ್ಘಾಟಿಸಿದರು.

ತಮ್ಮ ಉದ್ಘಾಟನಾ ನುಡಿಗಳಲ್ಲಿ ನಾಡಿನ ರಂಗಪರಂಪರೆಯನ್ನು ಸ್ಮರಿಸಿಕೊಂಡು ಗುಬ್ಬಿ ಕಂಪನಿಯಲ್ಲಿ ತಾವು ಕಳೆದ ದಿನಗಳನ್ನು ಸ್ಮರಿಸುತ್ತಾ ಗುಬ್ಬಿ ವೀರಣ್ಣನವರಾಗಲೀ, ಆ ಕಂಪನಿಯಲ್ಲಿದ್ದ ನಟರಾದ ಡಾ.ರಾಜಕುಮಾರ್, ಹೊನ್ನಪ್ಪ ಭಾಗವತರ್ ಮುಂತಾದ ಮೇರುಕಲಾವಿದರಾಗಲೀ ಹೆಚ್ಚು ಶಾಲಾಶಿಕ್ಷಣ ಪಡೆದವರಲ್ಲ, ಆದರೆ ಅವರೆಲ್ಲ ಕಲಾ ವಿಷಯಗಳಲ್ಲಿ ಒಂದೊಂದು ವಿಶ್ವವಿದ್ಯಾಲಯವೆಂಬಂತೆ ಬೆಳವಣಿಗೆ ಸಾಧಿಸಿ ತೋರಿದವರು. ಇಂದು ಮಕ್ಕಳು ಜೆಎಸ್‌ಎಸ್ ಕಲಾಮಂಟಪ ನಾಟಕಗಳನ್ನು ಜೆಎಸ್‌ಎಸ್ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳಿಗೆ ತರಬೇತಿ ನೀಡಿ ರಂಗೋತ್ಸವದ ಮೂಲಕ ರಂಗ ಪ್ರದರ್ಶನ ನಡೆಸಿಕೊಂಡು ಬರುತ್ತಿರುವುದರ ಬಗ್ಗೆ ಮೆಚ್ಚುಗೆ ಸೂಚಿಸಿದರು. ಸಂಪೂರ್ಣ ರಾಮಾಯಣ ನಾಟಕ ಸನ್ನಿವೇಶದಲ್ಲಿನ ಹಾಡೊಂದನ್ನು ಸ್ವತಃ ಹಾಡಿ, ಪೌರಾಣಿಕ ನಾಟಕಗಳನ್ನು ಸಹ ಪ್ರದರ್ಶಿಸುವಲ್ಲಿ ಗಮನವಹಿಸುವಂತೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಗೀತಾ ಮಹದೇವಪ್ರಸಾದ್ ವೈದ್ಯಕೀಯ ತಪಾಸಣಾ ಶಿಬಿರದ ಬಗ್ಗೆ ಅಪಾರ ಮೆಚ್ಚುಗೆ ಪಡಿಸಿದರು. ತಮ್ಮ ತಂದೆಯರು ಲಯನ್ಸ್‌ಕ್ಲಬ್ ಮೂಲಕ ಮೈಸೂರಿನಲ್ಲಿ ನಡೆಸುತ್ತಿದ್ದ ಒಂದು ದಿನದ

ಶಿಬಿರದಲ್ಲಿನ ದಿನಗಳನ್ನು ಸ್ಮರಿಸಿಕೊಂಡು ಕೋವಿಡ್‌ಗೆ ತುತ್ತಾಗಿದ್ದ ತಮಗೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ದೊರೆತ ಚಿಕಿತ್ಸೆ ನನ್ನನ್ನು ಬದುಕಿಸಿದೆ, ಸುತ್ತೂರು ಶ್ರೀಗಳ ಕೃಪೆ ಇದರ ಹಿಂದಿನ ಶಕ್ತಿಯೆಂದು ನುಡಿದು ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು. ರಂಗೋತ್ಸವ ಸಾಂಸ್ಕೃತಿಕ ಶಕ್ತಿಯಾಗಿ ಶಾಲಾ ಕಾಲೇಜುಗಳಲ್ಲಿ ನಾಟಕ ಪ್ರದರ್ಶನಗಳನ್ನು ನಡೆಸುತ್ತಾ ಬರುತ್ತಿರುವುದರ ಜೊತೆಗೆ ಒಂದು ಪ್ರದರ್ಶನವನ್ನು ನೋಡಲು ಸಾರ್ವಜನಿಕರಿಗೂ ಅವಕಾಶ ಮಾಡಿಕೊಟ್ಟಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯರಾದ ಡಾ. ಹೆಚ್. ಬಸವನಗೌಡಪ್ಪ ಸ್ವಾಗತ ಕೋರಿ ತಮ್ಮ ಪ್ರಸ್ತಾವಿಕ ಮಾತುಗಳಲ್ಲಿ ಶಿಬಿರದಲ್ಲಿ ಲಭ್ಯವಿರುವ ಚಿಕಿತ್ಸಾ ಸೌಕರ್ಯಗಳನ್ನು ಕುರಿತಂತೆ ಮಾಹಿತಿ ನೀಡಿದರು. ನಂತರ ಜೆಎಸ್‌ಎಸ್ ಕಲಾಮಂಟಪದ ರಂಗೋತ್ಸವದ ಸಂಚಾಲಕರಾದ ಶ್ರೀ ಚಂದ್ರಶೇಖರ ಹೆಗ್ಗೊಠಾರ 1948ರಿಂದ ನಾಟಕಗಳನ್ನು ಜೆಎಸ್‌ಎಸ್ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳಿಗೆ ತರಬೇತಿ ನೀಡಿ ರಂಗೋತ್ಸವದ ಮೂಲಕ ರಂಗ ಪ್ರದರ್ಶನ ನಡೆಸಿಕೊಂಡು ಬರುತ್ತಿರುವುದರ ಬಗ್ಗೆ ಮಾಹಿತಿ ನೀಡಿ, ರಂಗಕಲೆಗೆ ಮನಸ್ಸನ್ನು ಗುಣಪಡಿಸುವ ಶಕ್ತಿಯಿದೆಯೆಂದು ತಿಳಿಸಿದರು.

ಸಮಾರಂಭದಲ್ಲಿ ಮೊದಲಿಗೆ ಕು. ಪ್ರಿಯಾಂಕ ಮತ್ತು ತಂಡದವರು ಪ್ರಾರ್ಥನೆ ನಡೆಸಿಕೊಟ್ಟರು, ಪದವಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪ ವಂದನಾರ್ಪಣೆ ಸಲ್ಲಿಸಿದರು. ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿ ಕಾರ್ಯಕ್ರಮವನ್ನು ನಿರೂಪಿಸಿದರು. ಇದೇ ಸಂದರ್ಭದಲ್ಲಿ ವೇದಿಕೆ ಮೇಲಿದ್ದ ವಿವಿಧ ಗಣ್ಯರಿಗೆ ಗೌರವ ಸಮರ್ಪಣೆ ಮಾಡಲಾಯಿತು, ಸಮಾರಂಭದಲ್ಲಿ ಸಾರ್ವಜನಿಕರು, ಗುಂಡ್ಲುಪೇಟೆ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ, ವಿದ್ಯಾರ್ಥಿಗಳು, ಮಾಧ್ಯಮದ ಮಿತ್ರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರದಲ್ಲಿ ಜೆಎಸ್‌ಎಸ್ ಕಲಾಮಂಟಪದವತಿಯಿಂದ ರಂಗೋತ್ಸವದ ಪ್ರಯುಕ್ತ 'ಹಲಗಲಿ ಬೇಡರು' ನಾಟಕ ಪ್ರದರ್ಶನಗೊಂಡಿತು.

ಪ್ರಾಚಾರ್ಯರು 20/12/22
ಜೆ ಎಸ್ ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ - 571 111
20/12

ಜೆಎಸ್‌ಎಸ್ ಆಸ್ಪತ್ರೆ, ಮೈಸೂರು ಇವರು ಜೆಎಸ್‌ಎಸ್ ಕಾಲೇಜು, ಗುಂಡ್ಲುಪೇಟೆ ಇಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಜೆಎಸ್‌ಎಸ್ ಕಲಾ ಮಂಟಪ ಇವರು ಸಾದರಪಡಿಸಿದ ಜೆಎಸ್‌ಎಸ್ ರಂಗೋತ್ಸವ-2022ರ ಉದ್ಘಾಟನಾ ಸಮಾರಂಭದ ಸುದ್ದಿ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವುದರ ವಿವರ.

# ಜೆಎಸ್‌ಎಸ್ ಸಂಸ್ಥೆ ಸಾಧನೆ ಅದ್ವಿತೀಯ

## ಉಚಿತ ಆರೋಗ್ಯ ತಪಾಸಣಾ ಶಿಬಿರ, ಜೆಎಸ್‌ಎಸ್ ರಂಗೋತ್ಸವಕ್ಕೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಚಾಲನೆ

**ವಿಕ ಸುದ್ದಿಲೋಕ** ಗುಂಡ್ಲುಪೇಟೆ

ಧಾರ್ಮಿಕ, ಶಿಕ್ಷಣ ಇತರೆ ಕ್ಷೇತ್ರಗಳ ಜತೆಗೆ ಆರೋಗ್ಯ ಕ್ಷೇತ್ರದಲ್ಲಿ ಜೆಎಸ್‌ಎಸ್ ಸಂಸ್ಥೆಯ ಸಾಧನೆ ಅದ್ವಿತೀಯ ಎಂದು ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಅಭಿಪ್ರಾಯಪಟ್ಟರು.

ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಆಸ್ಪತ್ರೆ ಇವರ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಜೆಎಸ್ ಎಸ್ ರಂಗೋತ್ಸವ-2022 ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ''ನಾಲ್ಕು ದಶಕದ ಹಿಂದೆ ಮೈಸೂರಿನಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡ ಜೆಎಸ್‌ಎಸ್ ಆಸ್ಪತ್ರೆಯೀಗ 1800 ಬೆಡ್ ಗಳ ರಾಜ್ಯದ ದೊಡ್ಡ ಆಸ್ಪತ್ರೆಯಾಗಿ ಗಮನ ಸೆಳೆದಿದೆ. ಹಿಂದೆ ಚಿಕಿತ್ಸೆಯಿಲ್ಲದೆ ಸಾಂಕ್ರಾಮಿಕ ರೋಗಗಳಿಂದ ಜನರು ಸಾಯುವ ಕಾಲವಿತ್ತು. ಆದರೆ ಈಗ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಆರೋಗ್ಯ ಸಂಬಂಧಿಸಿದ ಸಕಲ ಸೇವೆಗಳು ಲಭ್ಯ ಇವೆ. ಇಂತಹ ಆಸ್ಪತ್ರೆ ವತಿಯಿಂದ ಗ್ರಾಮೀಣ ಭಾಗದ ಜನರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಲು ಶಿಬಿರ ಹಮ್ಮಿಕೊಂಡಿರುವುದು ಉತ್ತಮ ಬೆಳವಣಿಗೆ,'' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗುಂಡ್ಲುಪೇಟೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಜೆಎಸ್‌ಎಸ್ ರಂಗೋತ್ಸವ-2022 ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭವನ್ನು ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವೆ ಡಾ. ಗೀತಾ ಮಹದೇವಪ್ರಸಾದ್ ಮಾತನಾಡಿ, ''ಕೊರೊನಾ ಎರಡನೇ ಅಲೆ ಸಂದರ್ಭದಲ್ಲಿ ನನಗೆ ಜೆಎಸ್‌ಎಸ್ ಆಸ್ಪತ್ರೆ ಜೀವದಾನ ನೀಡಿದ್ದು, ನಾನು ಇದನ್ನು ಎಂದಿಗೂ ಮರೆಯಲಾರೆ. ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ ಉಚಿತ ಆರೋಗ್ಯ ತಪಾಸಣಾ ಶಿಬಿರ ವರ್ಷ ಕಾಲ ಪ್ರತಿ ತಿಂಗಳ ನಾಲ್ಕನೇ ಭಾನುವಾರ ನಡೆಯುತ್ತದೆ. ಆಸ್ಪತ್ರೆಯ ಎಲ್ಲಾ ವಿಭಾಗಗಳ ವೈದ್ಯರು ಇಲ್ಲಿ ಹಾಜರಿದ್ದು, ಪರೀಕ್ಷೆ ಮಾಡಿ ಅಗತ್ಯ ಸಲಹೆ, ಮಾರ್ಗದರ್ಶನದ ಜತೆಗೆ ಚಿಕಿತ್ಸೆಗೂ ಕ್ರಮ ಕೈಗೊಳ್ಳುತ್ತಾರೆ,'' ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಡಾ.ಎಸ್.ಪಿ.ಮಂಜುನಾಥ್ ಮಾತನಾಡಿ, ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಗೀತಮಹದೇವಪ್ರಸಾದ್ ರಂತೆ ಸಾಕಷ್ಟು ಮಂದಿ ನಮ್ಮ ಆಸ್ಪತ್ರೆ ಸೇವೆ ಬಗ್ಗೆ ಧನ್ಯತಾ ಭಾವ ವ್ಯಕ್ತಪಡಿಸಿದ್ದಾರೆ. ನಮ್ಮ ಮೆಡಿಕಲ್ ಕಾಲೇಜು ಉತ್ತಮ ವೈದ್ಯರ ತಯಾರಿ ಮೂಲಕ ಕೀರ್ತಿ ಗಳಿಸಿದೆ. ಈಗ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶಯದಂತೆ 13 ತಿಂಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸುತ್ತಿದ್ದೇವೆ,'' ಎಂದು ತಿಳಿಸಿದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಎಚ್.ಬಸವನಗೌಡಪ್ಪ, ರಾಜ್ಯೋತ್ಸವ ಪುರಸ್ಕೃತರಾದ ವೈ.ಎಂ.ಪುಟ್ಟಣ್ಣಯ್ಯ, ಜೆಎಸ್‌ಎಸ್ ಕಲಾ ಮಂಟಪದ ಸಂಚಾಲಕ ಚಂದ್ರಶೇಖರಚಾರ್ ಹೆಗ್ಗೋಠಾರ, ಆಸ್ಪತ್ರೆಯ ಮುಖ್ಯಸ್ಥ ಆರ್. ಮಹೇಶ್, ಕಾಂಗ್ರೆಸ್ ಯುವ ಮುಖಂಡ ಎಚ್.ಎಂ.ಗಣೇಶ್ ಪ್ರಸಾದ್, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ.ಸುನೀಲ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಜೆಎಸ್‌ಎಸ್ ಕಾಲೇಜು ಪ್ರಾಂಶುಪಾಲ ಮರಿಸ್ವಾಮಪ್ಪ ಹಾಜರಿದ್ದರು.

ದಿನಾಂಕ: 20-12-2022

ದಿನಪತ್ರಿಕೆ- ವಿಜಯ ಕರ್ನಾಟಕ

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು

## ಗುಂಡ್ಲುಪೇಟೆ–571 111

## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಕಾರ್ಯಕ್ರಮದ ವರದಿ

ಮಾನವೀಯತೆಯಿಂದ ಹೊರತಾದ ವಿಜ್ಞಾನದಿಂದ ಇಂದು ನಮ್ಮ ಜಗತ್ತಿಗೆ ಅಪಾಯಗಳಿವೆ

– ಪ್ರೊ. ಮೈಸೂರು ಕೃಷ್ಣಮೂರ್ತಿ

ದಿನಾಂಕ: 17–2–2023 ರಂದು ಜೆಎಸ್‌ಎಸ್ ಅನುಭವಮಂಟಪದಲ್ಲಿ ಬೆಳಗ್ಗೆ 11-00 ಗಂಟೆಗೆ **ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ಮತ್ತು 2021–22ರ ಕಾಲೇಜಿನ ವಾರ್ಷಿಕ ಸಂಚಿಕೆ 'ನೆನಪಿನಂಗಳ' ಬಿಡುಗಡೆ** ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಜ್ಯೋತಿ ಬೆಳಗುವುದರ ಮೂಲಕ ಸಮಾರಂಭವನ್ನು , ಕೆ.ಆರ್. ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಮೈಸೂರು ಕೃಷ್ಣಮೂರ್ತಿ ಉದ್ಘಾಟಿಸಿದರು. ಮೈಸೂರಿನ ಪ್ರಾದೇಶಿಕ ಜಂಟಿ ಕಛೇರಿ, ಕಾಲೇಜು ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಎ.ಬಿ. ನಾಗೇಂದ್ರ ಪ್ರಸಾದ್ ನೆನಪಿನಂಗಳ ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಉದ್ಘಾಟನಾ ಭಾಷಣದಲ್ಲಿ ಪ್ರೊ. ಮೈಸೂರು ಕೃಷ್ಣಮೂರ್ತಿ ಇವರು ರಾವಣ ಶಿವನಿಂದ ಆತ್ಮಲಿಂಗವನ್ನು ಪಡೆದುಕೊಳ್ಳವಲ್ಲಿನ ಪುರಾಣ ಕಥನದ ಮೂಲಕ ಇಲ್ಲಿ ಈಶ್ವರ ಮಾನವೀಯ ಸಂಕೇತವಾದರೆ ಶಕ್ತಿಯಾದ ಪಾರ್ವತಿ ವಿಜ್ಞಾನದ ಸಂಕೇತ ಈ ಎರಡೂ ಒಟ್ಟಿಗಿದ್ದಲ್ಲಿ ಜನಜೀವನ ಸುಖಮಯವಾಗಿರುತ್ತದೆಂದು ತಿಳಿಸಿದರು. ಮಾನವೀಯತೆಯಿಂದ ಹೊರತಾದ ವಿಜ್ಞಾನದಿಂದ ಇಂದು ನಮ್ಮ ಜಗತ್ತಿಗೆ ಅಪಾಯಗಳಿವೆ ಎಂದು ಎಚ್ಚರಿಸಿದರು. ಹಾಗಾಗಿ ಸಮಾಜಕ್ಕೆ ಆತ್ಮ ಜ್ಞಾನದ ಆಧ್ಯಾತ್ಮ ಮತ್ತು ಶಕ್ತಿರೂಪದ ವಿಜ್ಞಾನ ಎರಡೂ ಅಗತ್ಯವಿದೆ. ಇಲ್ಲಿ ಆಧ್ಯಾತ್ಮ ಎಂದರೆ ಈ ಭೂಮಿಯಲ್ಲಿನ ಎಲ್ಲ ಜೀವಗಳನ್ನು ಒಳಗೊಂಡಂತೆ ಮನುಷ್ಯ ಮಾನವತಾ ನೆಲೆಗಟ್ಟಿನಲ್ಲಿ ತಾನು ಬದುಕಿ ಸಾರ್ಥಕತೆ ಹೊಂದುವುದು. ವಿದ್ಯಾರ್ಥಿಗಳು ಪಠ್ಯಕ್ರಮಗಳ ಅಧ್ಯಯನದ ಜೊತೆಗೆ ಜೀವನದ ಪರೀಕ್ಷೆಯನ್ನು ಸವಾಲಾಗಿ ಸ್ವೀಕರಿಸುವ ಆತ್ಮಸ್ಥೈರ್ಯದ ಪಾಠಗಳತ್ತ ಗಮನಕೊಡಬೇಕಿದೆ. ಇಲ್ಲದಿದ್ದರೆ ಜೀವನವೆಂಬ ಚಕ್ರವ್ಯೂಹದಲ್ಲಿ ಗೆಲ್ಲಲಾಗುವುದಿಲ್ಲವೆಂದು ತಿಳಿಸಿದರು. ಆತ್ಮಸ್ಥರ್ಯ ಗಳಿಕೆಗೆ ಪೂರಕವಾಗಿ ಸಾಂಸ್ಕೃತಿಕ, ಕಲೆ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಗೆಲುವಿನ ಭರವಸೆ ಹುಟ್ಟಿಸುತ್ತವೆಂದು ತಿಳಿಸಿದರು.

ಮುಖ್ಯ ಅತಿಥಿ ರಾಷ್ಟ್ರೀಯ ಕ್ರೀಡಾಪಟು, **ಶ್ರೀ ರವಿ ಟಿ.ಎಸ್** ಮೈಸೂರು ಇವರು ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕಿದೆ. ಎನ್‌ಎಸ್‌ಎಸ್, ಎನ್‌ಸಿಸಿ ಘಟಕಗಳು ವಿದ್ಯಾರ್ಥಿಗಳಿಗೆ ಶಾರೀರಿಕ, ಬೌದ್ಧಿಕ ಮತ್ತು ಮನೋವಿಕಸನಕ್ಕೆ ಪ್ರೋತ್ಸಾಹ ನೀಡುತ್ತವೆಂದು ನುಡಿದರು.

ಕಾಲೇಜಿನ ಪ್ರಾಚಾರ್ಯರಾದ ಶ್ರೀ ಮರಿಸ್ವಾಮಪ್ಪ ತಮ್ಮ ಆಶಯ ನುಡಿಗಳಲ್ಲಿ ಕಾಲೇಜು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಅವರ ಭವಿಷ್ಯಕ್ಕೆ ಉತ್ತಮ ಅವಕಾಶ ಸಿಗುವಂತಾಗಲಿ ಎಂಬ ಸದಾಶಯವನ್ನು ಪರಮ ಪೂಜ್ಯ ಜಗದ್ಗುರುಗಳು ಹೊಂದಿದ್ದಾರೆ. ಹಾಗಾಗಿ ಪದವಿಯ ಜೊತೆಗೆ ಕಲೆ, ಸಂಸ್ಕೃತಿ, ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಮಹೋನ್ನತ ಉದ್ದೇಶದಿಂದ ತನ್ನ ಆರಂಭದಿನಗಳಿಂದಲೂ ಈ ಎರಡೂ ವೇದಿಕೆಗಳು ಪ್ರೋತ್ಸಾಹ ನೀಡುತ್ತಲೇ ಬಂದಿದೆ. ಇದರಿಂದ ನಮ್ಮಲ್ಲಿ ರಾಷ್ಟ್ರೀಯ, ಅಂತರಾಷ್ಟ್ರೀಯ, ಮತ್ತು ರಾಜ್ಯಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ ಹಿರಿಯ ವಿದ್ಯಾರ್ಥಿಗಳಿದ್ದಾರೆ, ಈಗಿನ ವಿದ್ಯಾರ್ಥಿಗಳು ಇವರಿಂದ ಪ್ರೇರಣೆ ಪಡೆದು ಮುಂದೆ ಸಾಗಬೇಕಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಶಿಕ್ಷಣ ಇಲಾಖೆಯ ಮೈಸೂರಿನ ಪ್ರಾದೇಶಿಕ ಜಂಟಿ ಕಛೇರಿ, ಸಹಾಯಕ ನಿರ್ದೇಶಕರಾದ ಶ್ರೀ ಎ.ಬಿ. ನಾಗೇಂದ್ರ ಪ್ರಸಾದ್ ವಾರ್ಷಿಕ ಸಂಚಿಕೆ ನೆನಪಿನಂಗಳದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ತಮ್ಮ ವಿದ್ಯಾರ್ಥಿ ಜೀವನವನ್ನು ಮೆಲುಕು ಹಾಕಿದರು, ಇಂದು ಓದು ಮತ್ತು ಸಾಧನೆಗೆ ಅನೇಕ ಬಗೆಯ ಅನುಕೂಲಗಳು ಕೈಗೆಟುಕುವಂತಿವೆ, ಹಾಗಾಗಿ ವಿದ್ಯಾರ್ಥಿಗಳು ಇವುಗಳ ಸದುಪಯೋಗವನ್ನು ಪಡೆಯುವತ್ತ ಹೆಜ್ಜೆಹಾಕಬೇಕಿದೆ, ಇಲ್ಲದೇ ಹೋದಲ್ಲಿ ಮೊಬೈಲು, ಕಂಪ್ಯೂಟರ್ ಮುಂತಾದ ಸೌಲಭ್ಯಗಳು ನಿರುಪಯುಕ್ತ ಗೀಳುಗಳಾಗಿ ಭವಿಷ್ಯಕ್ಕೆ ಮಾರಕವಾಗಬಲ್ಲವೆಂದು ತಿಳಿಸಿದರು.

ವೇದಿಕೆಯಲ್ಲಿ ಶ್ರೀ ವೆಂಕಟೇಶ್ ಪತ್ರಾಂಕಿತ ವ್ಯವಸ್ಥಾಪಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಮೈಸೂರು, ಶ್ರೀ ಬಸವರಾಜಪ್ಪ ಹೆಚ್.ಪಿ ಪ್ರಾಂಶುಪಾಲರು, ಜೆಎಸ್‌ಎಸ್ ಮಹಿಳಾ ಪ.ಪೂ.ಕಾಲೇಜು, ಗುಂಡ್ಲುಪೇಟೆ, ಶ್ರೀ ಎಂ ಬಸವರಾಜು ಸಂಚಾಲಕರು, ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಿತಿ, ಶ್ರೀ ಮಲ್ಲುಸ್ವಾಮಿ ಎನ್, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಮತ್ತು ವಿದ್ಯಾರ್ಥಿ ಕಾರ್ಯದರ್ಶಿಗಳಾದ ಶ್ರೀ ವಿಶ್ವಾಸ್ ವಿ ವಾಣಿಜ್ಯಶಾಸ್ತ್ರ ವಿಭಾಗ ಶ್ರೀ ಸಿದ್ದರಾಜು ಕೆ ಕಲಾ ವಿಭಾಗ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮೊದಲಿಗೆ ಕು. ಅಶ್ವಿನಿ ತೃತೀಯ ಬಿ.ಎ ಪ್ರಾರ್ಥನೆ ನಡೆಸಿಕೊಟ್ಟರು, ಕು. ಕುಸುಮ ಅಂತಿಮ ಬಿ.ಎ ಸ್ವಾಗತಕೋರಿದರು, ಕು, ಚಂದನ ದ್ವಿತೀಯ ಬಿ.ಎ ವಂದನಾರ್ಪಣೆ ಮಾಡಿದರು, ಕು. ರಶ್ಮಿ. ದ್ವಿತೀಯ ಬಿಕಾಂ ಕಾರ್ಯಕ್ರಮವನ್ನು ನಿರೂಪಿಸಿದರು.

ಸಮಾರಂಭದಲ್ಲಿ ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು, ಸಭೆಯ ನಂತರ ವಿದ್ಯಾರ್ಥಿಗಳು ಸಾಂಸ್ಕೃತಿಕ ಮನರಂಜನೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಪ್ರಾಚಾರ್ಯರು
ಜೆ.ಎಸ್.ಎಸ್.ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ-571 111